Misc. 65/2020
RW-7 (C.K. Puttaswamy)

<u>ದಿನಾಂಕ 12.09.2024 ರಂದು ಪ್ರಮಾಣ ವಚನ ಭೋಧಿಸಲಾಯಿತು.</u>

1. ನಾನು ನನ್ನ ಮುಖ್ಯ ವಿಚಾರಣೆಗೆ ಬದಲಾಗಿ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಸದರಿ ಸಾಕ್ಷಿ ಪ್ರಮಾಣಪತ್ರವನ್ನು ಬರೆಯಲು ಮಾಹಿತಿಯನ್ನು ನಮ್ಮ ವಕೀಲರಿಗೆ ನಾನೇ ನೀಡಿದ್ದೇನೆ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ಸಂಗತಿಗಳು ಸತ್ಯ ಸಂಗತಿಗಳು ಆಗಿವೆ. ಸದರಿ ಪ್ರಮಾಣಪತ್ರಕ್ಕೆ ನಾನು ನನ್ನ ಸಹಿಯನ್ನು ಹಾಕಿದ್ದೇನೆ.

<u>ದಾಖಲೆಗಳನ್ನು ಗುರುತಿಸುವ ಸಲುವಾಗಿ ಮುಂದುವರೆದ ಮುಖ್ಯ ವಿಚಾರಣೆ ಮಾಡಲು ಅನುಮತಿ ಕೇಳಿದ್ದಾರೆ. ಅನುಮತಿಯನ್ನು ನೀಡಲಾಗಿದೆ.</u>

<u>ಮುಂದುವರೆದ ಮುಖ್ಯ ವಿಚಾರಣೆಃ- 3 ಮತ್ತು 5 ನೇ ಎದುರುದಾರರ ಪರವಾಗಿ ಶ್ರೀ. ಎಸ್ ವಿ ಎಂ ವಕೀಲರಿಂದಃ-</u>

2. ಈಗ ನನಗೆ ತೋರಿಸಿದ ದಾಖಲೆಯಲ್ಲಿ ಅಂದರೆ ನಿಆರ್-13 ಎಂದು ಗುರುತು ಆಗಿರುವ ಮರಣ ಶಾಸನದಲ್ಲಿ ನನ್ನ ಸಹಿ ಇದೆ.

3. **ಸೂಚನೆಃ**- ನಿಆರ್ -13(ಸಿ) ಎಂದು ಗುರುತು ಆಗಿರುವ ಸಹಿಯು ತಮ್ಮ ಸಹಿ ಆಗಿದೆ ಎಂದು ಈ ಸಾಕ್ಷಿದಾರರು ನುಡಿದಿದ್ದಾರೆ.

4. ಸದರಿ ಮರಣ ಶಾಸನಕ್ಕೆ ಚೆನ್ನಮ್ಮ ರವರು ತಮ್ಮ ಎಡಗೈ ಹೆಬ್ಬೆಟ್ಟಿನ ಗುರುತುಗಳನ್ನು ಹಾಕಿದ್ದಾರೆ ಮತ್ತು ಸದರಿ LTM ಗಳನ್ನು ನೋಡಿದರೆ ಗುರುತಿಸುತ್ತೇನೆ.

5. **ಸೂಚನೆಃ**- ಈಗ ಸಾಕ್ಷಿಯು Ex.R.13(D), (E), (F), (G) ಎಂದು ಗುರುತು ಆಗಿರುವ LTM ಗಳನ್ನು ಶ್ರೀಮತಿ ಚೆನ್ನಮ್ಮ ರವರ LTM ಗಳು ಎಂದು ಗುರುತಿಸಿದ್ದಾರೆ.

6. ನಿಆರ್-13 ದಾಖಲೆಗೆ ಶಶಿ ಕುಮಾರ್ ಮತ್ತು ವಿಶ್ವ ರವರು ತಮ್ಮ ತಮ್ಮ ಸಹಿಗಳನ್ನು ಮಾಡಿದ್ದಾರೆ. ಮತ್ತು ಸದರಿ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ.

7. **ಸೂಚನೆಃ**– ಈಗ ಸಾಕ್ಷಿಯು ನಿಆರ್–13 ರಲ್ಲಿರುವ ಸಹಿಗಳನ್ನು ಅಂದರೆ ನಿಅರ್–13(ಎ) ಮತ್ತು ನಿಆರ್13(ಬಿ) ಎಂದು ಗುರುತು ಆಗಿರುವ ಸಹಿಗಳನ್ನು ಕ್ರಮವಾಗಿ **ಶಶಿಕುಮಾರ್** ಮತ್ತು **ವಿಶ್ವ** ರವರ ಸಹಿಗಳು ಎಂಬುದಾಗಿ ಗುರುತಿಸಿದ್ದಾರೆ.

ಪಾಟೀ ಸವಾಲುಃ– ಎದುರುದಾರ ಸಂಖ್ಯೆ 1 ಮತ್ತು 6 ಮತ್ತು 11 ರವರ ಪರವಾಗಿ ಕೋರಿಕೆಯ ಮೇರೆಗೆ ಮುಂದೂಡಿದೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.